# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **2426 (2069)**
**ಸದಸ್ಯರ ಹೆಸರು** : **ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)**
**ಉತ್ತರಿಸುವವರು** : **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು**
**ಉತ್ತರಿಸುವ ದಿನಾಂಕ** : **22.03.2022**

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ "ಉದ್ಯಮಿಯಾಗು ಉದ್ಯೋಗ ನೀಡು" ಕಾರ್ಯಕ್ರಮವನ್ನು ರೂಪಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಕಾರ್ಯಕ್ರಮದ ಉದ್ದೇಶವೇನು; ಕಾರ್ಯಕ್ರಮದಿಂದ ಈವರೆಗೆ ಎಷ್ಟು ಜನ ಯುವಕರು ಉದ್ಯಮಿಯಾಗುವಂತಹ ಅವಕಾಶವನ್ನು ಹೊಂದಿದ್ದಾರೆ; (ವಲಯವಾರು ಮತ್ತು ಜಿಲ್ಲಾವಾರು ಸಂಪೂರ್ಣ ವಿವರವನ್ನು ಒದಗಿಸುವುದು) | ಪದವಿ ಹಾಗೂ ಇತರೆ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳು ಓದು ಮುಗಿದ ನಂತರ ಕೆಲಸ ಅರಸುವ ಬದಲು ಸ್ವಾವಲಂಬಿಯಾಗಿ ಹಲವರಿಗೆ ಉದ್ಯೋಗಾವಕಾಶ ಸೃಷ್ಟಿಸುವಂತಾಗಬೇಕು ಎಂಬ ಆಶಯದೊಂದಿಗೆ "ಉದ್ಯಮಿಯಾಗು ಉದ್ಯೋಗ ನೀಡು" ಶೀರ್ಷಿಕೆಯಡಿಯಲ್ಲಿ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br><br>ಉದ್ಯಮಿಗಳಾಗಿ ಉದ್ಯೋಗ ಸೃಷ್ಟಿಸುವುದು ಹೇಗೆ, ಯಾವ ಕ್ಷೇತ್ರಗಳಲ್ಲಿ ಹೂಡಿಕೆಗೆ ಅವಕಾಶ ಇದೆ, ಉದ್ಯಮ ಆರಂಭಕ್ಕೆ ಅನುಕೂಲವಾಗುವ ಸರ್ಕಾರದ ಯೋಜನೆಗಳು ಯಾವುವು, ಆರ್ಥಿಕ ನೆರವು ಹೇಗೆ, ಎಲ್ಲಿ ಪಡೆಯಬಹುದು ಎಂಬುದರ ಬಗ್ಗೆ ತಜ್ಞರಿಂದ ಕಾರ್ಯಕ್ರಮದಲ್ಲಿ ವಿವರಗಳನ್ನು ನೀಡಲಾಗುತ್ತದೆ.<br><br>ಅದರಂತೆ, ದಿನಾಂಕ: 12.10.2021 ರಂದು ಬೆಂಗಳೂರು ವಿಭಾಗದ ಹಾಗೂ ದಿನಾಂಕ: 03.01.2022 ರಂದು ಕಲಬುರಗಿ ವಿಭಾಗದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br><br>ಬೆಂಗಳೂರು ವಿಭಾಗದಲ್ಲಿ ಸುಮಾರು 5000 ಕ್ಕೂ ಹೆಚ್ಚು ಹಾಗೂ ಕಲಬುರಗಿ ವಿಭಾಗದಲ್ಲಿ ಸುಮಾರು 4,400 ಕ್ಕೂ ಹೆಚ್ಚು ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಗೂ ಉದ್ಯಮ ಆಕಾಂಕ್ಷಿಗಳು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ. |

| | | |
|---|---|---|
| ಆ | ಉದ್ಯಮಿಯಾಗಿರುವಂತಹ ಯುವಕರು ಈವರೆಗೆ ಯಾವ ಯಾವ ಜಿಲ್ಲೆಯಲ್ಲಿ ಉದ್ಯಮಗಳನ್ನು ಪ್ರಾರಂಭಿಸಿದ್ದಾರೆ; ಯುವ ಉದ್ಯಮಿಗಳು ಹೂಡಿರುವಂತಹ ಬಂಡವಾಳವೆಷ್ಟು; (ವಿವರಗಳನ್ನು ಒದಗಿಸುವುದು) | "ಉದ್ಯಮಿಯಾಗು ಉದ್ಯೋಗ ನೀಡು" ಕಾರ್ಯಕ್ರಮದ ಮೊದಲನೇ ಹಂತದಲ್ಲಿ ಸ್ವಂತ ಕೈಗಾರಿಕೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡುವುದು ಹಾಗೂ ಸರ್ಕಾರದ ಸವಲತ್ತು ಕುರಿತು ಜಾಗೃತಿ ಮೂಡಿಸುವುದಾಗಿದೆ.<br>ಇನ್ನು ಮುಂದಿನ ದಿನಗಳಲ್ಲಿ ಆಸಕ್ತ ಯುವಜನರಿಗೆ ಪರಿಣಿತರಿಂದ ವಿಶೇಷ ತರಬೇತಿಯನ್ನು ನೀಡುವ ಯೋಜನೆಯನ್ನು ಹೊಂದಲಾಗಿದೆ. ಉದ್ಯಮ ಸ್ಥಾಪಿಸಲು ಮುಂದೆ ಬರುವ ಯುವಜನರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ. |
| ಇ | ಯುವ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಇರುವಂತಹ ವ್ಯವಸ್ಥೆ ಏನು; ಮಾರಾಟ ವ್ಯವಸ್ಥೆಯಿಂದ ಯುವ ಉದ್ಯಮಿಗಳಿಗೆ ಏನಾದರೂ ತೊಂದರೆಗಳಾಗಿವೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರವನ್ನು ಒದಗಿಸುವುದು) | |
| ಈ | ಈ ಉದ್ಯಮಿಗಳಿಂದ ಈವರೆಗೆ ಎಷ್ಟು ಜನ ವಿದ್ಯಾವಂತ ನಿರುದ್ಯೋಗಿ ಯುವಕರುಗಳಿಗೆ ಉದ್ಯೋಗವನ್ನು ಒದಗಿಸಲಾಗಿದೆ; ಉದ್ಯೋಗಿಗಳು ನಮ್ಮ ರಾಜ್ಯದವರೇ ಅಥವಾ ಹೊರ ರಾಜ್ಯದವರೇ? (ಸಂಪೂರ್ಣ ವಿವರವನ್ನು ಒದಗಿಸುವುದು) | |

**ಸಿಐ 89 ಎಸ್‌ಪಿಐ 2022**

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು